# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 134 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2022 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿಗೆ ಮಂಡ್ಯ ಜಿಲ್ಲೆಯಲ್ಲಿ ಸುರಿದಂತಹ ಭಾರಿ ಮಳೆಯಿಂದಾಗಿ ಶಾಲಾ-ಕಾಲೇಜುಗಳ ಕಟ್ಟಡಗಳು ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ಹಾನಿಗೊಳಗಾದ ಕಟ್ಟಡಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | (see table below) |

| ಕ್ರಸ | ತಾಲ್ಲೂಕಿನ ಹೆಸರು | ಮಳೆಯಿಂದ ಹಾನಿಗೊಳಗಾದ ಸರ್ಕಾರಿ ಶಾಲೆಗಳ ಸಂಖ್ಯೆ |
|---|---|---|
| 01 | ಕೆ.ಆರ್.ಪೇಟೆ | 52 |
| 02 | ಪಾಂಡವಪುರ | 17 |
| 03 | ಮಂಡ್ಯಉತ್ತರ | 14 |
| 04 | ಮಂಡ್ಯದಕ್ಷಿಣ | 52 |
| 05 | ಮದ್ದೂರು | 28 |
| 06 | ಮಳವಳ್ಳಿ | 23 |
| 07 | ನಾಗಮಂಗಲ | 42 |
| 08 | ಶ್ರಿರಂಗಪಟ್ಟಣ | 48 |
| | ಒಟ್ಟು | 276 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಹಾನಿಗೊಳಗಾಗಿರುವ ಶಾಲಾ-ಕಾಲೇಜುಗಳ ಕಟ್ಟಡಗಳನ್ನು ದುರಸ್ಥಿಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ: | ಹೌದು |
| ಈ) | ಹಾಗಿದ್ದಲ್ಲಿ, ಈ ಕಟ್ಟಡಗಳ ದುರಸ್ಥಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ಜಿಲ್ಲೆಯಲ್ಲಿ ಆಗಸ್ಟ್-2022 ರ ಮಾಹೆಯಲ್ಲಿ ಸುರಿದ ಮಳೆಯಿಂದ ಹಾನಿಗೊಳಗಾದ 276 ಶಾಲೆಗಳ ವರದಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರಿಗೆ ಸಲ್ಲಿಸಲಾಗಿರುತ್ತದೆ. ಅದರಂತೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ NDRF/SDRF ಅನುದಾನದಲ್ಲಿ ಈ ಕೆಳಕಂಡಂತೆ ತಾಲ್ಲೂಕುವಾರು ಅನುದಾನ |

ನಿಗಧಿಯಾಗಿರುತ್ತದೆ.

| ಕ್ರಸ | ತಾಲ್ಲೂಕಿನ ಹೆಸರು | ಸರ್ಕಾರಿ ಶಾಲೆಗಳ ಸಂಖ್ಯೆ | NDRF/SDRFರಡಿ ನಿಗಧಿಯಾದಅನುದಾನ [ರೂ.ಲಕ್ಷಗಳಲ್ಲಿ] |
|---|---|---|---|
| 01 | ಕೆ.ಆರ್.ಪೇಟೆ | 52 | 104.00 |
| 02 | ಪಾಂಡವಪುರ | 17 | 34.00 |
| 03 | ಮಂಡ್ಯಉತ್ತರ | 14 | 28.00 |
| 04 | ಮಂಡ್ಯದಕ್ಷಿಣ | 52 | 104.00 |
| 05 | ಮದ್ದೂರು | 28 | 56.00 |
| 06 | ಮಳವಳ್ಳಿ | 23 | 46.00 |
| 07 | ನಾಗಮಂಗಲ | 42 | 84.00 |
| 08 | ಶ್ರಿರಂಗಪಟ್ಟಣ | 48 | 96.00 |
| | ಒಟ್ಟು | 276 | 552.00 |

ಪ್ರಸಕ್ತ 2022-23ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ವಿಧಾನಸಭಾ ಕ್ಷೇತ್ರವಾರು ರೂ.50.00ಲಕ್ಷಗಳಂತೆ ತುರ್ತು ದುರಸ್ಥಿ ಕಾಮಗಾರಿಗಾಗಿ ಒಟ್ಟು ರೂ.350.00ಲಕ್ಷಗಳ ಅನುದಾನ ಒದಗಿಸಲು ಕ್ರಮವಹಿಸಿದೆ.

ಮುಂದುವರೆದು, ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಶಾಲೆಗಳಿಗೆ ಕಟ್ಟಡ ನಿರ್ಮಾಣ/ದುರಸ್ಥಿಯನ್ನೊಳಗೊಂಡಂತೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು 14 ಮತ್ತು 15ನೇ ಹಣಕಾಸು ಆಯೋಗದಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಮವಹಿಸಲು ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 435 ಜಿಪಸ 2021, ದಿನಾಂಕ:08.11.2021 ನ್ನು ಹೊರಡಿಸಲಾಗಿದ್ದು, ಅಗತ್ಯ ಕ್ರಮವಹಿಸುವಂತೆ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಮಂಡ್ಯ ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದಾದ್ಯಂತ ಶಾಲಾ ಕಟ್ಟಡ ದುರಸ್ಥಿಗೊಳಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ.

ಇಪಿ: 347 ಯೋಸಕ 2022

(ಬಿ.ಸಿ.ನಾಗೇಶ್)

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು**